**ಓ ಎಸ್ ನಂಃ29/2016**

**ಡಿ. ಡಬ್ಲ್ಯೂ ಃ 1**

**ದಿಃ 08.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎನ್ ವಕೀಲರಿಂದಃ**

ನನ್ನ ತಾತ ರೇವಣ್ಣ ಇವರಿಗೆ ಇಬ್ಬರು ಹೆಂಡತಿಯರು. ಅವರೆಂದರೆನಂಜಮ್ಮ ಮತ್ತು ರೇವಕ್ಕ ಇರುತ್ತದೆ. ನಂಜಮ್ಮ ಇವರಿಗೆ ಗಂಗಮ್ಮ ಎಂಬ ಮಗಳು ಇರುತ್ತಾಳೆ ಎಂದರೆ ಸರಿ. ಗಂಗಮ್ಮ ಮತ್ತು ನಂಜಮ್ಮ ತೀರಿಕೊಂಡಿದ್ದಾರೆ ಎಂದರೆ ಸರಿ. ಶಿವರುದ್ರಯ್ಯ , ಸುವರ್ಣಮ್ಮ , ಶಿವಶಂಕರಯ್ಯ, ದಾಕ್ಷಾಯಣಮ್ಮ, ಭ್ರಮರಾಭಿಂಕೆ ಮತ್ತು ರುದ್ರೇಶ ಇವರು ನಂಜಮ್ಮ ಇವರ ಮಕ್ಕಳೆಂದರೆ ಸರಿ. ಇವರೆಲ್ಲರು ನಂಜಮ್ಮ ಇವರ ವಾರಸುದಾರರು ಎಂದರೆ ಸರಿ. ರೇವಕ್ಕ ಇವರಿಗೆ ಚಂದ್ರಶೇಖರ ಮತ್ತು ರೇಣುಕಪ್ಪ ಎಂಬ ಇಬ್ಬರು ಮಕ್ಕಳಿರುತ್ತಾರೆ. ಚಂದ್ರಶೇಖರಯ್ಯ ಅಂದರೆ ಈ ಕೇಸ್ ನ ವಾದಿ ಮತ್ತು ರೇಣುಕಯ್ಯ ಇವರ ವಾರಸುದಾರರು ಪ್ರತಿವಾದಿಗಳು ಎಂದರೆ ಸರಿ. ದಾಕ್ಷಾಯಣಮ್ಮ ಇವರು ವಾದಿಯ ಹೆಂಡತಿ ಎಂದರೆ ಸರಿ.

ನಾನು ದಿನಾಂಕಃ 5.05.1990 ರಂದು ಹುಟ್ಟಿರುತ್ತೇನೆ. ನಾನು ಹುಟ್ಟುವ ಮೊದಲು ರೇವಣ್ಣ ಇವರ ಕುಟುಂಬದಲ್ಲಿ ಏನು ವ್ಯವಹಾರವಾಗಿದ್ದವು ಎಂದು ಖುದ್ದಾಗಿ ಗೊತ್ತಿಲ್ಲ, ನಮ್ಮ ತಾಯಿ ಹೇಳಿದ್ದರು. ಈ ಕೇಸ್ ನ ಬಗ್ಗೆ ನಮ್ಮ ತಾಯಿ ಎಲ್ಲ ವಿಷಯಗಳು ಬಗ್ಗೆ ಗೊತ್ತು. ಅವರನ್ನು ಕರೆಯಿಸಿ ಸಾಕ್ಷಿ ಹೇಳಿಸಲು ಯಾವುದೆ ತೊಂದರೆ ಇಲ್ಲ. ದಾವಾ ಸ್ವತ್ತುಗಳ ರೇವಕ್ಕ ಇವರ ಸ್ವತ್ತುಗಳಿರುತ್ತವೆ, ರೇವಣ್ಣ ಇವರ ಸ್ವತ್ತುಗಳೆಂದರೆ ಸರಿಯಲ್ಲ. ರೇವಕ್ಕ ಇವರಿಗೆ ಆ ಸ್ವತ್ತು ಅವರ ತಂದೆ ಲಿಂಗೇಗೌಡ ರಿಂದ ಬಂದಿರುತ್ತದೆ. ಆ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ರೇವಕ್ಕ ಇವರು ತೀರಿಕೊಂಡಿದ್ದಾರೆ ಎಂದರೆ ಸರಿ. ರೇವಕ್ಕ ಇವರು ಬದುಕಿದ್ದಾಗ ದಾವಾ ಸ್ವತ್ತಿನಲ್ಲಿ ಬರವಣಿಗೆ ಮೂಲಕ ಯಾವುದೆ ಭಾಗ ಆಗಿಲ್ಲ. ಅದೇ ರೀತಿ ಅವರು ಬದುಕಿದ್ದಾಗ ದಾನಪತ್ರ ಮತ್ತು ವಿಲ್ ಪತ್ರ ಇವುಗಳನ್ನು ಬರೆದುಕೊಟ್ಟಿಲ್ಲ. ರೇವಕ್ಕ ಇವರು ಬದುಕಿದ್ದಾಗ ಎಲ್ಲರು ಒಟ್ಟಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ.

ರೇವಣ್ಣ, ನಂಜಮ್ಮ ಮತ್ತು ರೇವಕ್ಕ ಇವರು ಹೆಬ್ಬೆಟ್ಟಿನ ರುಜುಗಳನ್ನು ಮಾಡುತ್ತಿದ್ದರು. ರೇವಕ್ಕ ಇವರು ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ರೇವಕ್ಕ ಇವರು ಹೆಬ್ಬೆಟ್ಟು ಹಾಕುತ್ತಿದ್ದರು ಎಂಬುವುದರ ಬಗ್ಗೆ ಯಾವುದೆ ದಾಖಲೆ ನನ್ನ ಬಳಿ ಇಲ್ಲ. ಅದೇ ರೀತಿ ರೇವಕ್ಕಮತ್ತು ರೇವಣ್ಣ ಇವರು ಸಹಿ ಮಾಡುತ್ತಿದ್ದರು ಎಂದು ನಮ್ಮ ತಾಯಿ ಹೇಳುತ್ತಿದ್ದರು. ಅವರ ಸಹಿಗಳು ಇರುವ ಪತ್ರಗಳನ್ನು ನಾನು ನೋಡಿಲ್ಲ. ನನ್ನತಾಯಿಯವರಿಗೆ ಈ ವಿಷಯಗಳು ಗೊತ್ತಿದ್ದವು. ನನ್ನ ತಾಯಿಯನ್ನು ಈ ಕೇಸ್ ನಲ್ಲಿ ಸಾಕ್ಷಿ ಮಾಡಿಸುತ್ತೇನೆ. ದಾವಾ ಸ್ವತ್ತಿನ ದಾಖಲಾತಿಗಳು ನಮ್ಮ ತಾಯಿ ಈರಮ್ಮ ಇವರ ಹೆಸರಿನಲ್ಲಿವೆ. ಅವುಗಳನ್ನು ಪೌತಿ ಖಾತೆಯ ಆಧಾರದ ಮೇಲೆ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆ ರೀತಿ ಖಾತೆ ಮಾಡಿಸುವಾಗ ವಾದಿಯ ಹೇಳಿಕೆ ಅಥವಾ ಸಹಿ ಪಡೆದಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ಈಗಲೂ ಸಹ ವಾದಿಯ ಜಂಟಿ ಸ್ವಾಧೀನಾನುಭವದಲ್ಲಿರುತ್ತವೆ ಎಂದರೆ ಸರಿಯಲ್ಲ.

**ಮುಂದುವರದೆ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**